<u>ಕರ್ನಾಟಕ ವಿಧಾನ ಪರಿಷತ್ತು</u>

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1023
2)	ಸದಸ್ಯರ ಹೆಸರು	ಶ್ರೀ ಹೆಚ್.ಎಂ.ರಮೇಶ್ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)
3)	ಉತ್ತರಿಸಬೇಕಾದ ದಿನಾಂಕ	22-12-2021
4)	ಉತ್ತರಿಸಬೇಕಾದ ಸಚಿವರು	ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ರಾಜ್ಯದ ಯಾವ ಯಾವ ಭಾಗಗಳಲ್ಲಿ ಮೀನುಗಾರಿಕೆ ನಡೆಯುತ್ತಿದೆ; (ಪ್ರದೇಶವಾರು, ಲಭ್ಯ ಪ್ರಮಾಣ ಕುರಿತಾಗಿ ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ಕರಾವಳಿ ಪ್ರದೇಶ ಮತ್ತು ಒಳನಾಡಿನ ಜಲಸಂಪನ್ಮೂಲಗಳಾದ ಕೆರೆಗಳು, ಜಲಾಶಯ ಮತ್ತು ನದಿ ಭಾಗಗಳಲ್ಲಿ ಮೀನುಗಾರಿಕೆ ನಡೆಯುತ್ತಿದೆ. ರಾಜ್ಯವು 320 ಕಿ.ಮೀ. ಉದ್ದದ ಕರಾವಳಿ ತೀರ ಪ್ರದೇಶವನ್ನು ಮತ್ತು 27,000 ಚದರ ಕಿ.ಮೀ. ಖಂಡಾವರಣ ಪ್ರದೇಶದಲ್ಲಿ (continental shelf) ಕಡಲು ಮೀನುಗಾರಿಕೆ ನಡೆಯುತ್ತಿದೆ. ಒಳನಾಡು ಜಲಸಂಪನ್ಮೂಲಗಳ ಜಿಲ್ಲಾವಾರು ಮಾಹಿತಿಯನ್ನು **<u>ಅನುಬಂಧ</u>**ದಲ್ಲಿ ನೀಡಲಾಗಿದೆ.
ಆ)	ಆಳ ಸಮುದ್ರದ ಮೀನುಗಾರಿಕೆಯಲ್ಲಿ ತೊಡಗಿರುವವರು ಅನುಭವಿಸುತ್ತಿರುವ ಅನಾನುಕೂಲತೆ, ಕಾರ್ಮಿಕರ ಅಲಭ್ಯತೆ ಸಮಸ್ಯೆಗಳ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ; ಹಾಗಿದ್ದಲ್ಲಿ, ಈ ಕುರಿತಾಗಿ ಕೈಗೊಂಡ ಪರಿಹಾರಾತ್ಮಕ ಕ್ರಮಗಳೇನು; (ಋುಂಹುತ ನೀಡುವುದು)	ಹೌದು. 1) ಸಮುದ್ರದಲ್ಲಿ ಮೀನಿನ ಲಭ್ಯತೆ ಬಗ್ಗೆ ಮೀನು ಹಿಡಿಯಲು ಅನುಕೂಲವಾಗುವಂತೆ ಆಳಸಮುದ್ರ ಮೀನುಗಾರರಿಗೆ Potential fishing zones ಕುರಿತ ಮಾಹಿತಿಯನ್ನು INCOIS, ಹೈದರಾಬಾದ್ ಸಂಸ್ಥೆ ವತಿಯಿಂದ ನೇರವಾಗಿ ರವಾನಿಸಲಾಗುತ್ತಿದೆ. ದೋಣಿಗಳ ಮಾಲೀಕರು ಅವರ ದೋಣಿಗಳಿಗೆ ಅಗತ್ಯವಿರುವ ಕಾರ್ಮಿಕರನ್ನು ಸ್ಥಳೀಯವಾಗಿ ತೆಗೆದುಕೊಳ್ಳುತ್ತಾರೆ ಮತ್ತು ಸ್ಥಳೀಯವಾಗಿ ಕಾರ್ಮಿಕರು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಹೊರರಾಜ್ಯಗಳಿಂದ ಕಾರ್ಮಿಕರನ್ನು ಕರೆಸಿಕೊಂಡು ಮೀನುಗಾರಿಕೆ ನಡೆಸುತ್ತಿರುತ್ತಾರೆ. 2) ಡೀಸೆಲ್ ವಿತರಣೆ ಪ್ರಕ್ರಿಯೆಯನ್ನು ಮತ್ತಷ್ಟು ಜನಸ್ನೇಹಿಯನ್ನಾಗಿಸಲು 2021-22ನೇ ಸಾಲಿನಿಂದ ರಾಜ್ಯ ಮಾರಾಟ ಕರರಹಿತ ಡೀಸೆಲ್‌ನ್ನು ಡೀಸೆಲ್ ಡೆಲಿವರಿ ಪಾಯಿಂಟ್‌ನಲ್ಲಿಯೇ ವಿತರಿಸಲಾಗುತ್ತಿದೆ. 3) "ಸಾಗರಮಾಲಾ" ಯೋಜನೆಯಡಿಯಲ್ಲಿ ಸಮಗ್ರ ಅಭಿವೃದ್ಧಿ ಕಾರ್ಯಕ್ರಮದಲ್ಲಿ ದೋಣಿಗಳ ಸರಾಗ ಸಂಚಾರಕ್ಕಾಗಿ ಬಂದರು ಮತ್ತು ಅಳಿವೆ ಕೇಂದ್ರದಲ್ಲಿ ಹೂಳು ತೆಗೆಯಲು ಕ್ರಮವಹಿಸಲಾಗಿದೆ. 4) ಮೀನುಗಾರರ ಸುರಕ್ಷತೆಗಾಗಿ ದ್ವಿಮುಖ ಸಂವಹನ ಸಾಧನಗಳನ್ನು ದೋಣಿಗಳಿಗೆ ಅಳವಡಿಸಲು ಕಡ್ಡಾಯಗೊಳಿಸಲಾಗಿದೆ. 5) ಹವಾಮಾನ ವೈಪರೀತ್ಯದ ಎಚ್ಚರಿಕೆ ಸಂದೇಶಗಳನ್ನು ಮೀನುಗಾರರಿಗೆ ಮುಂಚಿತವಾಗಿಯೇ ರವಾನಿಸಲಾಗುತ್ತಿದೆ.

		6) ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಸಾಂಪ್ರದಾಯಿಕ ಮೀನುಗಾರರು ಆಳಸಮುದ್ರ ಮೀನುಗಾರಿಕೆ ದೋಣಿಗಳನ್ನು ಹೊಂದಲು ನೆರವು ನೀಡುವ ಕಾರ್ಯಕ್ರಮದಡಿ ಸಾಮಾನ್ಯ ವರ್ಗದ ಮೀನುಗಾರರಿಗೆ ಘಟಕ ವೆಚ್ಚದ ಶೇ.40 ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಹಾಗೂ ಮಹಿಳಾ ಮೀನುಗಾರರಿಗೆ ಶೇ.60ರಷ್ಟು ಸಹಾಯಧನ ನೀಡುವ ಕಾರ್ಯಕ್ರಮವಿರುತ್ತದೆ.
ಇ)	ಅವೈಜ್ಞಾನಿಕ ನೀತಿ, ಕೇವಲ ಸಾಂಪ್ರದಾಯಕ ವಲ್ಲದ ವ್ಯಾಪಾರೀಕರಣ ಉದ್ದೇಶದ ಮೀನುಗಾರಿಕೆಯೂ ಈ ಉದ್ಯಮದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿರುವ ಅಂಶವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರದ ಧೀರ್ಘಾವಧಿ ಯೋಜನೆಗಳು ಯಾವುವು? (ಸಂಪೂರ್ಣ ಮಾಹಿತಿ ನೀಡುವುದು)	ಹೌದು. 1) ಮೀನಿನ ಸಂತಾನೋತ್ಪತ್ತಿಯನ್ನು ಸಂರಕ್ಷಿಸಲು ಯಾಂತ್ರೀಕೃತ ಮೀನುಗಾರಿಕೆ ಚಟುವಟಿಕೆಗಳನ್ನು ಪ್ರತಿ ವರ್ಷ ಜೂನ್ 01 ರಿಂದ ಜುಲೈ 31 ರವರೆಗೂ (ಉಭಯ ದಿನಗಳು ಸೇರಿ) ಒಟ್ಟು 61 ದಿನಗಳ ಮೀನುಗಾರಿಕೆ ನಿಷೇಧವನ್ನು ಹೇರಲಾಗುತ್ತಿದೆ. 2) ಅವೈಜ್ಞಾನಿಕ ಪದ್ಧತಿಯಾದ ಬುಲ್ ಟ್ರಾಲಿಂಗ್, ಬೆಳಕು ಮೀನುಗಾರಿಕೆ, ಚೌರಿ ಹಾಕಿ ಬೊಂಡಾಸ್ ಹಿಡಿಯುವುದನ್ನು ರಾಜ್ಯ ಸರ್ಕಾರ ನಿಷೇಧಿಸಿದೆ. 3) ಮರಿ ಮೀನುಗಳ ಹಿಡುವಳಿಯನ್ನು ತಡೆಗಟ್ಟಲು 19 ಜಾತಿಯ ಮೀನುಗಳಿಗೆ ಕನಿಷ್ಟ ಗಾತ್ರ ನಿಗದಿಗೊಳಿಸಿ ಆದೇಶಿಸಲಾಗಿದೆ. 4) ಸಣ್ಣ ಮೀನುಗಳ ಹಿಡುವಳಿ ಆಗದಂತೆ ತಡೆಗಟ್ಟಲು ಟ್ರಾಲ್ ದೋಣಿಗಳಲ್ಲಿ 35 ಎಂಎಂ ಗಿಂತ ಕಡಿಮೆ ಕಣ್ಣಿನ ಬಲೆಗಳ ಉಪಯೋಗವನ್ನು ನಿಷೇಧಿಸಲಾಗಿದೆ. 5) ಕಾನೂನು ಉಲ್ಲಂಘನೆ ಪ್ರಕರಣಗಳಿಗೆ ಕರ್ನಾಟಕ ಕಡಲು ಮೀನುಗಾರಿಕೆ ನಿಯಂತ್ರಣ ಕಾಯ್ದೆ, 1986ರ ಪ್ರಕಾರ ದಂಡ ವಿಧಿಸಲಾಗುತ್ತಿದೆ ಹಾಗೂ ಸುಸ್ಥಿರ ಮತ್ತು ಜವಾಬ್ದಾರಿಯುತ ಮೀನುಗಾರಿಕೆಯನ್ನು ಇನ್ನಷ್ಟು ಉತ್ತಮ ರೀತಿಯಲ್ಲಿ ನಿರ್ವಹಿಸಲು ಮತ್ತು ಅವೈಜ್ಞಾನಿಕ ಮೀನುಗಾರಿಕೆಯನ್ನು ನಿಯಂತ್ರಿಸಲು ಕರಡು ತಿದ್ದುಪಡಿ ಕಾಯ್ದೆಯಲ್ಲಿ ಸೂಕ್ತ ಅಂಶಗಳನ್ನು ಸೇರಿಸಲಾಗಿದೆ.

ಸಂಖ್ಯೆ: ಪಸಂಮೀಇ-184 ಮೀಇಇ 2021

17/12/2021

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಾ.ಪಿ.ಎಮ್. ತಿಮ್ಮೇಗೌಡ ಇವರ
ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ: 1023ರ ಅನುಬಂಧ

Back

Abstract of Tanks

Head Office

Sl No.	Zone	District	Water Resource Typ							
			ಇಲಾಖೆ ಕೆರೆ		ಗ್ರಾಮ ಪಂಚಾಯತಿ ಕೆರೆ		ಜಲಾಶಯ		ನದಿ ಭಾಗ	
			Total Tanks	WSA (in Hec)	Total Tanks	WSA (in Hec)	Total Tanks	WSA (in Hec)	Total Tanks	Length (in Km)
1	ಬೆಂಗಳೂರು	ಬೆಂಗಳೂರು (ಗ್ರಾ)	103	6175.07	0	0.00	0	0.00	8	42
2		ಚಿಕ್ಕಬಳ್ಳಾಪುರ	214	11413.03	0	0.00	0	0.00	0	0
3		ಬೆಂಗಳೂರು (ನಗರ)	182	5642.39	5	27.56	2	2322.00	0	0
4		ಕೋಲಾರ	146	11388.88	0	0.00	2	472.00	3	24
5		ರಾಮನಗರ	107	4073.60	1	9.00	4	1857.98	0	0
6		ತುಮಕೂರು	401	31336.89	0	0.00	4	3078.00	0	0
7	Total		1153	70029.86	6	36.56	12	7729.98	11	66
7	ಶಿವಮೊಗ್ಗ	ಶಿವಮೊಗ್ಗ	446	5942.41	5	78.79	9	39542.00	9	245
8		ಚಿಕ್ಕಮಗಳೂರು	128	4150.40	0	0.00	2	11415.00	0	0
9		ಚಿತ್ರದುರ್ಗ	169	17990.64	4	236.92	3	9753.00	3	2.75
10		ದಾವಣಗೆರೆ	94	5431.03	1	30.34	2	3624.50	7	118
11	Total		837	33514.48	10	346.05	16	64334.50	19	365.75
11	ಬೆಳಗಾವಿ	ಬೆಳಗಾವಿ	221	3410.92	0	0.00	5	22914.00	7	219
12		ಬಿಜಾಪುರ	160	5998.71	0	0.00	2	61835.00	8	148
13		ಧಾರವಾಡ	128	1738.78	0	0.00	1	490.00	0	0

14		ಗದಗ	31	1548.10	0	0.00	0	0.00	0	0
15		ಹಾವೇರಿ	198	5775.19	0	0.00	1	183.00	19	[illegible]
16		ಬಾಗಲಕೋಟೆ	47	2069.52	0	0.00	0	0.00	6	103
17	**Total**		785	20541.22	0	0.00	9	85422.00	40	675
17	ಮೈಸೂರು	ಮೈಸೂರು	100	4169.31	0	0.00	3	8585.00	12	215
18		ಹಾಸನ	178	9541.06	0	0.00	3	11723.00	8	147
19		ಕೊಡಗು	9	17.83	9	11.02	2	1991.00	9	138
20		ಮಂಡ್ಯ	179	11521.44	0	0.00	4	13419.00	26	274.61
21		ಚಾಮರಾಜನಗರ	91	5633.60	0	0.00	3	885.00	5	76.1
22	**Total**		557	30883.24	9	11.02	15	36603.00	60	850.71
22	ಬಳ್ಳಾರಿ	ಬಳ್ಳಾರಿ	101	8373.31	11	493.37	4	40143.00	2	108
23		ಬೀದರ್	92	2295.62	0	0.00	3	6687.00	0	0
24		ರಾಯಚೂರು	80	3004.35	0	0.00	3	665.00	9	220
25		ಗುಲ್ಬರ್ಗಾ	82	3069.03	0	0.00	6	5804.30	11	374
26		ಯಾದಗಿರಿ	74	2674.35	4	151.45	2	245.20	16	522
27		ಕೊಪ್ಪಳ	52	2265.56	0	0.00	5	1643.00	4	72
28	**Total**		481	21682.22	15	644.82	23	55187.50	42	1296
28	ಕಾರವಾರ	ಉತ್ತರಕನ್ನಡ	86	1133.39	0	0.00	8	23382.00	14	245
29	**Total**		86	1133.39	0	0.00	8	23382.00	14	245
29	ಉಡುಪಿ	ಉಡುಪಿ	7	57.38	0	0.00	0	0.00	0	0
30	**Total**		7	57.38	0	0.00	0	0.00	0	0
	Grand Total		3906	177841.79	40	1038.45	83	272658.98	186	3498.46

f2